ಶ್ರೀ ಆರ್. ಎನ್. ನ್ಯಾಮಗೌಡ.—ಅಧ್ಯಕ್ಷರೆ, ಈ ಬೆರಳೂ ಸರಿಯಾಗಿ ಇರುತ್ತವೆಯೇ ? ತಮಗೆ ನಾನು ಒಳ್ಳೆಯದು ಹೇಳಬೇಕೆಂದರೆ ನನಗೆ ತಾವು ಹೇಳುವುದಕ್ಕೆ ಬಿಡುವುದಿಲ್ಲ. ಜಿಲ್ಲಾ ಪರಿಷತ್ ಚುನಾವಣೆ ಬರುವ ಪೂರ್ವದಲ್ಲಿ ಆಡಳಿತ ಪಕ್ಷದ ಎಷ್ಟೋ ಜನ ಪುಢಾರಿಗಳು ಏನು ಮಾಡಿದರೆಂದರೆ ಹಸಿರು ಕಾರ್ಡ್ ಎಲ್ಲರಿಗೂ ಕೊಡಿ ಎಂದು ಹೇಳಿದ್ದರ ಹಣೆಯಬರಹದಿಂದ ಇದಾಗಿದೆ. ಮಾನ್ಯ ಮಂತ್ರಿಗಳು ಹೇಳಿದ ಹಾಗೆ ಉತ್ತರ ಕನ್ನಡ ಜಿಲ್ಲೆಯಲ್ಲಿರತಕ್ಕ ಫೋಟೊ ಹಸಿರು ಕಾರ್ಡ್ ೨೬ಳ್ಳ ಅಲ್ಲ, ೭೫ ಪರ್ಸೆಂಟ್ ಫೋಟೊ ಕಾರ್ಡ್ ಇವೆ. ಇನ್ನುಳಿದ ೨೫ ಪರ್ಸೆಂಟ್ ಬಡವರಿಗೆ ಸಿಕ್ಕಿರಬಹುದು. ಆದ್ದರಿಂದ ತಾವು ಹೊಸದಾಗಿ ಸರ್ವೆ ಮಾಡಿಸಿ ಫೋಟೊ ಕಾರ್ಡ್‌ಗಳನ್ನು ಅಧಿಕಾರಿಗಳು ಏನು ಕೊಟ್ಟಿದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ? ಯಾವಾಗ ಪ್ರಯತ್ನ ಮಾಡುತ್ತೀರಿ ಎನ್ನುವುದನ್ನು ತಿಳಿಸಬೇಕು.

ಶ್ರೀ ಬಸವರಾಜ್ ಪಾಟೀಲ್ ಅನ್ವರಿ.—ಅಧಿಕಾರಿಗಳು ರೂಲಿಂಗ್ ಪಾರ್ಟಿಯಲ್ಲಿದ್ದಾರೆ ಎನ್ನುವುದನ್ನು ಒಪ್ಪುವುದಾದರೆ, ಐಆರ್‌ಡಿಪಿ ಪಟ್ಟಿಯನ್ನು ನಾವು ಮಾಡಿದವರಲ್ಲ. ಆವರೇ ಆ ಪಟ್ಟಿ ಮಾಡಿರುವುದು, ಅದನ್ನು ಅವರು ಮರೆತಿದ್ದಾರೆ. ಆದರಲ್ಲಿ ಬರುವಂತಹ ಫಲಾನುಭವಿಗಳ ಪಟ್ಟಿಯನ್ನು ಎರಡೂ ಕಡೆಯವರು ಸೇರಿ ಮಾಡಿದ್ದಾರೆ ಎನ್ನುವುದನ್ನು ಮಾನ್ಯ ಸದಸ್ಯರು ಒಪ್ಪುತ್ತಾರೆ ಎಂದು ಹೇಳಲಿಕ್ಕೆ ಬಯಸುತ್ತೇನೆ. ಇದನ್ನು ಬಿಟ್ಟು ಮಾನ್ಯ ಸದಸ್ಯರು ಬೇರೆ ಯಾವ ರೀತಿ ಗುರುತಿಸಬೇಕು ಎನ್ನುವ ಬಗ್ಗೆ ಏನು ಸಲಹೆ ಕೊಡುತ್ತಾರೆ ಆದನ್ನು ನಾನು ಕಾರ್ಯರೂಪಕ್ಕೆ ತರಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ.—ಪ್ರಶ್ನೆ ೫೧೦ (೧೨೦೧) ಸದಸ್ಯರು ಗೈರುಹಾಜರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಲ್ಲಿಕಾರ್ಜುನ ಪಾಟೀಲರು ನನಗೆ, ಆ ಪ್ರಶ್ನೆಯನ್ನು ಕೇಳಲಿಕ್ಕೆ ಅನುಮತಿ ಪತ್ರ ಬರೆದುಕೊಟ್ಟು ಹೋಗಿದ್ದಾರೆ. ನಾನು ಕೇಳಬಹುದು ಅಥವಾ ಚಿನ್ನಪ್ಪನವರಾದರೂ ಕೇಳಬಹುದು.

ಅಧ್ಯಕ್ಷರು.—ಹಾಗಾದರೆ ಕೇಳಿ.

ಪ್ರಶ್ನೆ ೫೧೦ (೧೨೦೧)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೆ, 'How many tonnes of palmolein oil are being supplied to the state from April 1986 ?' ಅಧ್ಯಕ್ಷರೆ, ಇದರಲ್ಲಿ ಅನೆಕ್ಸ್‌ಚರ್ ಇಲ್ಲ, ಉತ್ತರ ಕೊಟ್ಟಿದ್ದಾರೆ ಆದ್ದರಿಂದ, ಮಾನ್ಯ ಅಧ್ಯಕ್ಷರು ಈ ಪ್ರಶ್ನೆಯನ್ನು ತಡೆಹಿಡಿಯಬೇಕೆಂದು ಕೇಳಿಕೊಳ್ಳುತ್ತೇನೆ. ನನ್ನಲ್ಲಿ ಈಗ ಉತ್ತರ ಇಲ್ಲ. ನಾನು ಉತ್ತರವನ್ನು ನೋಡಿಕೊಳ್ಳಲಾರದೆ ಕೇಳಲಿಕ್ಕೆ ಬರುವುದಿಲ್ಲ. ಏಕೆಂದರೆ, ಇದರಲ್ಲಿ ಅನೆಕ್ಸ್‌ಚರ್ ಇಲ್ಲ, ಆದ್ದರಿಂದ ಇದನ್ನು ತಡೆಹಿಡಿಯಬೇಕು.

ಶ್ರೀ ಬಸವರಾಜ್ ಪಾಟೀಲ್ ಅನ್ವರಿ.—ಅಧ್ಯಕ್ಷರೆ, ಇದಕ್ಕೆ ನಾನು ಮತ್ತೊಂದು ದಿವಸ ಉತ್ತರ ಕೊಡುತ್ತೇನೆ.

ಅಧ್ಯಕ್ಷರು.—ಅದನ್ನು ತಡೆಹಿಡಿಯಲಾಗಿದೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು.

ರಾಜ್ಯದಲ್ಲಿ ಕೇಂದ್ರ ಸರ್ಕಾರದವರು ಅಕ್ಕಿ ವಿತರಣೆ ಮಾಡಲು ನೀಡಿರುವ ಅಕ್ಕಿಯ ಪ್ರಮಾಣದ ಬಗ್ಗೆ.

೧೨೬೭. ಶ್ರೀ ಎನ್. ಎಂ. ಅಡ್ಯಂತಾಯ(ಸಂರತ್ನಲ್).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧ನೇ ಜನವರಿ ೧೯೮೪ರಿಂದ ಡಿಸೆಂಬರ್ ೩೧ರವರೆಗೆ ರಾಜ್ಯದಲ್ಲಿ ೨-೦೦ ರೂ. ಗೆ ಅಕ್ಕಿ ವಿತರಣೆ ಮಾಡಲು ಕೇಂದ್ರ ಸರ್ಕಾರದವರು ನೀಡಿರುವ ಅಕ್ಕಿಯ ಪ್ರಮಾಣವೆಷ್ಟು ?

ಅ) ಈ ವಿತರಣ ಅಕ್ಕಿಯ ಪ್ರಮಾಣದಲ್ಲಿ ಸರ್ಕಾರದವರು ಸಬ್ಸಿಡಿ ರೂಪದಲ್ಲಿ ನೀಡಿರುವ ಅಕ್ಕಿಯ ಪ್ರಮಾಣವೆಷ್ಟು ?

ಶ್ರೀ ಅಬ್ದುಲ್ ನಜೀರ್ ಸಾಬ್(ವಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).— [illegible]

ಅ) ೨-೦೦ ರೂ. ಗೆ ಕೆ.ಜಿ. ಅಕ್ಕಿ ಯೋಜನೆಯು ದಿನಾಂಕ ೧-೧೧-೮೫ರಿಂದ ಆರಂಭವಾದ್ದರಿಂದ ಉದ್ಭವಿಸುವುದಿಲ್ಲ.

ಆ) ಉದ್ಭವಿಸುವುದಿಲ್ಲ.

1962ರಲ್ಲಿ ಕರ್ನಾಟಕ-ಮಹಾರಾಷ್ಟ್ರ ಗಡಿ ಭಾಗಗಳಲ್ಲಿ ಭಾಷೆಯ ಬಗ್ಗೆ ಮುಖ್ಯಮಂತ್ರಿಗಳು ಪರಸ್ಪರ ಒಪ್ಪಂದ.

೧೫೬೭. ಶ್ರೀ ಎ. ಬಿ. ದೇಸಾಯಿ (ಧಾರವಾಡ ಗ್ರಾಮೀಣ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೬೨ರಲ್ಲಿ ಕರ್ನಾಟಕ-ಮಹಾರಾಷ್ಟ್ರ ಅಂದಿನ ಮುಖ್ಯಮಂತ್ರಿಗಳು ಪರಸ್ಪರ ಒಪ್ಪಿ ಕೊಂಡಂತೆ ಗಡಿ ಭಾಗಗಳಲ್ಲಿ ಯಾವ ಭಾಷೆಯಲ್ಲಿ ಅಲ್ಲಿಯ ಸ್ಥಳೀಕರು ಆಡುತ್ತಾರೋ ರಾಜ್ಯ ಭಾಷೆಯೊಂದಿಗೆ ಆ ಭಾಷೆಯಲ್ಲಿ ಸರ್ಕಾರವು ಆಜ್ಞೆಗಳನ್ನು ಹೊರಡಿಸಬೇಕೆಂಬುದು ಒಪ್ಪಂದವಾಗಿದೆಯೇ ?

ಆ) ಹಾಗಿದ್ದಲ್ಲಿ ಕರ್ನಾಟಕದ ಗಡಿ ಪ್ರದೇಶಗಳಲ್ಲಿ ಕನ್ನಡ ಭಾಷೆಯೊಂದಿಗೆ ಮರಾಠಿಯಲ್ಲಿಯೂ ಸರ್ಕಾರಿ ಆಜ್ಞೆಗಳನ್ನು ಹೊರಡಿಸುತ್ತಿದ್ದು, ಮಹಾರಾಷ್ಟ್ರದ ಗಡಿ ಪ್ರದೇಶಗಳಲ್ಲಿ ಮರಾಠಿ ಜೊತೆ ಕನ್ನಡ ಭಾಷೆಯಲ್ಲಿ ಸರ್ಕಾರಿ ಆಜ್ಞೆಗಳು ಹೊರಡಿಸುತ್ತಿಲ್ಲವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ರಾಮಕೃಷ್ಣ ಹೆಗಡೆ(ಮುಖ್ಯಮಂತ್ರಿಗಳು).—

ಅ) ೧೯೬೨ರಲ್ಲಿ ಇಂತಹ ಯಾವುದೇ ಒಪ್ಪಂದವಾಗಿಲ್ಲ.

ಆ) ಕರ್ನಾಟಕ ಸರಕಾರವು ಗಡಿ ಪ್ರದೇಶಗಳಲ್ಲಿ ಮರಾಠಿಯಲ್ಲಿ ಸರಕಾರಿ ಆಜ್ಞೆ ಹೊರಡಿಸುತ್ತಿಲ್ಲ, ಮಹಾರಾಷ್ಟ್ರ ಸರಕಾರವೂ ಈ ಬಗ್ಗೆ ಕ್ರಮ ತೆಗೆದುಕೊಂಡಿಲ್ಲವೆಂದು ತಿಳಿದು ಬರುತ್ತದೆ.

ಇ) ಮಹಾರಾಷ್ಟ್ರ ಮತ್ತು ಕರ್ನಾಟಕ ಸರಕಾರಗಳು ಉಭಯ ರಾಜ್ಯಗಳ ಹಿರಿಯ ಅಧಿಕಾರಿಗಳ ಜಂಟಿ ಸಮಿತಿಯನ್ನು ರಚಿಸಿದ್ದು ಈ ಜಂಟಿ ಸಮಿತಿಯು ನೀಡಿದ ಒಮ್ಮತದ ಶಿಫಾರಸುಗಳನ್ನು ಅನುಷ್ಠಾನಕ್ಕೆ ತರಬೇಕೆಂದು ಉಭಯ ರಾಜ್ಯಗಳು ಒಪ್ಪಿಕೊಂಡಿವೆ.

ನಂಜನಗೂಡು ತಾಲ್ಲೂಕಿಗೆ ಗ್ರಾಮಾಂತರ ಬಸ್ ಸೌಲಭ್ಯ.

೧೫೬೮. ಶ್ರೀ ಡಿ. ಟಿ. ಜಯಕುಮಾರ್(ನಂಜನಗೂಡು).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ನಂಜನಗೂಡು ತಾಲ್ಲೂಕಿಗೆ ಗ್ರಾಮಾಂತರ ಬಸ್ ಸೌಕರ್ಯವನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುವುದೇ ?

೨) ಈ ರೀತಿಯ ಸೌಕರ್ಯಕ್ಕೆ ಎಷ್ಟು ಬಸ್ಸುಗಳನ್ನು ಕೊಡಲಂ ಆಲೋಚಿಸಲಾಗಿದೆ.

೩) ಈ ಸೌಕರ್ಯವನ್ನು ಎಂದಿನಿಂದ ಪ್ರಾರಂಭ ಮಾಡಲು ಕ್ರಮ ಕೈಗೊಳ್ಳಲಾಗುವುದು ?